ತಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 77

ಆ) ಸ್ನಾತಕೋತ್ತರ ವ್ಯಾಸಂಗ ಪೂರೈಸಿ, ಮರುಸ್ಥಳ ನೇಮಕಾತಿ ಕೋರಿ ಬರುವ ವೈದ್ಯರಿಂದ ಈ ಖಾಲಿ ಇರುವ ಹುದ್ದೆ ಭರ್ತಿ ಮಾಡಿ ಈ ಸಮಸ್ಯೆ ಪರಿಹರಿಸಲಾಗುತ್ತಿದೆ. ಅಲ್ಲದೆ ಪ್ರಭಾರ ವ್ಯವಸ್ಥೆ ಮಾಡಿ ಆದಷ್ಟುಮಟ್ಟಿಗೆ ಸಮಸ್ಯೆಯನ್ನು ಬಗೆಹರಿಸಲಾಗುತ್ತಿದೆ.

ರಾಜ್ಯದಲ್ಲಿ ವೃತ್ತಿಪರ ಶಿಕ್ಷಣ

2184 - ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಹಾಗೂ ಮುದ್ರಣಾಲಯ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಜನಕ್ಕೆ ವೃತ್ತಿಪರ ಶಿಕ್ಷಣವನ್ನು ನೀಡಲಾಗುತ್ತಿದೆ?

ಆ) ಈ ಪೈಕಿ ಶೇಕಡ ಎಷ್ಟು ಭಾಗ ವಿದ್ಯಾರ್ಥಿಗಳು ತಾವು ಕೈಗೊಂಡ ವೃತ್ತಿಪರ ಶಿಕ್ಷಣದ ಲಾಭ ಪಡೆಯುತ್ತಿದ್ದಾರೆ?

ಇ) ವೃತ್ತಿಪರ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಗಳ ಅನುಕೂಲಕ್ಕೆ ಇರುವ ಸರ್ಕಾರದ ಯೋಜನೆಗಳಾವುವು?

ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಹಾಗೂ ಮುದ್ರಣಾಲಯ ಇಲಾಖೆಗಳ ಸಚಿವರು) :

ಅ) ರಾಜ್ಯಕ್ಕೆ ಕೇಂದ್ರ ಪ್ರಾಯೋಜಿತ ವೃತ್ತಿ ಶಿಕ್ಷಣ ಕಾರ್ಯಕ್ರಮದಡಿ 1427 ಕೋರ್ಸುಗಳು ಮಂಜೂರಾಗಿದ್ದು ಪ್ರತಿ ಕೋರ್ಸಿಗೆ 30 ಜನರಂತೆ ಒಟ್ಟು 42810 ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣಕ್ಕೆ ಅವಕಾಶವಿದೆ.

1996-97 ರಲ್ಲಿ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ದಾಖಲಾದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ :

ಪ್ರಥಮ ವರ್ಷ	:	32,908
ದ್ವಿತೀಯ ವರ್ಷ	:	41,436
ಒಟ್ಟು	:	**74,344**

ಆ) 1996-97ನೇ ಸಾಲಿನಲ್ಲಿ ಅಂತಿಮ ವರ್ಷದ 41436 ವಿದ್ಯಾರ್ಥಿಗಳಲ್ಲಿ 22584 ವಿದ್ಯಾರ್ಥಿಗಳು ಮಾತ್ರ (ಶೇಕಡ54.50) ಪರೀಕ್ಷೆಗೆ ಹಾಜರಾಗಿದ್ದಾರೆ. ಇವರಲ್ಲಿ 13575 ವಿದ್ಯಾರ್ಥಿಗಳು

ಪಾಸಾಗಿದ್ದಾರೆ. (ಶೇಕಡ 60.10) ಇದರಿಂದಾಗಿ ದ್ವಿತೀಯ ವರ್ಷದಲ್ಲಿ ದಾಖಲಾದ 41436 ವಿದ್ಯಾರ್ಥಿಗಳ ಪೈಕಿ ಶೇಕಡ 32.76 ವಿದ್ಯಾರ್ಥಿಗಳು ವೃತ್ತಿ ಶಿಕ್ಷಣದ ಲಾಭ ಪಡೆದಂತಾಗಿದೆ.

ಇ) ವೃತ್ತಿಪರ ಶಿಕ್ಷಣ ಪಡೆದ ವಿದ್ಯಾರ್ಥಿಗಳ ಅನುಕೂಲಕ್ಕೆ ಈ ಕೆಳಕಂಡ ಯೋಜನೆಗಳಿವ

(1) +2 ಹಂತದಲ್ಲಿ ವೃತ್ತಿ ಶಿಕ್ಷಣ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗ ಅಪ್ರೆಂಟಿಸ್ ಟ್ರೈನಿಂಗ್ ನೀಡುವ ದೃಷ್ಟಿಯಿಂದ ಭಾರತ ಸರ್ಕಾರವ ಅಪ್ರೆಂಟಿಸ್ ಆಕ್ಟ್ 1966ಕ್ಕೆ ತಿದ್ದುಪಡಿ ತಂದಿದೆ. ಬೋರ್ಡ್ ಆಫ ಅಪ್ರೆಂಟಿಸ್ ಟ್ರೈನಿಂಗ್ ಚೆನ್ನೈ ಇರುವ ಅರ್ಹ ವಿದ್ಯರ್ಥಿಗಳ ಸಂದರ್ಶನ ನಡೆಸುತ್ತದೆ. ತರಭೇತಿ ಸಮಯದಲ್ಲಿ 50:50ರ ಆಧಾರದ ಮೇಲೆ ಸ್ಟೈಫಂಡ ನೀಡಲಾಗುತ್ತದೆ.

(2) +2 ಹಂತದಲ್ಲಿ ವೃತ್ತಿ ಶಿಕ್ಷಣದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಸ್ವಯಂ ಉದ್ಯೋಗ ಹೊಂದಲು ಅವಕಾಶವಿದೆ. ಇದಕ್ಕಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಸಾಲವನ್ನು ಪಡೆಯಲು ಭಾರತ ಸರ್ಕಾರ ವ್ಯವಸ್ಥೆ ಮಾಡಿದೆ ಈ ಉದ್ದೇಶಕ್ಕಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದಲೂ ಹಾಗೂ ಕೋ-ಆಪರೇಟಿವ ಬ್ಯಾಂಕಿಂಗ್ ಆರ್ಗನೈಸೇಷನ್‌ಗಳಿಂದಲೂ ಹಣಕಾಸಿನ ಸಹಾಯ ಪಡೆಯುವ ವ್ಯವಸ್ಥೆಯೂ ಇದೆ.

(3) ಈಗಾಗಲೇ ರಾಜ್ಯ ಸರ್ಕಾರದ 173 ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾ ನಿಯಮಗಳಿಗೆ ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿ ತಿದ್ದುಪ ಮಾಡಲಾಗಿದೆ. ಇದರಿಂದಾಗಿ ಯಶಸ್ವಿ ವೃತ್ತಿ ಶಿಕ್ಷಣ ವಿದ್ಯಾರ್ಥಿಗಳು ವೇತನಾಧಾ ಉದ್ಯೋಗ ಪಡೆಯುವ ಸೌಲಭ್ಯವನ್ನು ಹೆಚ್ಚಿಸದಂತಾಗಿದೆ.

ಕುಣಿಗಲ್ ಕ್ಷೇತ್ರದಲ್ಲಿ ವೈದ್ಯರಿಲ್ಲದ ಆಸ್ಪತ್ರೆಗಳು

2185 - ಶ್ರೀ ಹೆಚ್. ಬಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಆರೋಗ್ಯ ಸಚಿವ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೂರು ಆಸ್ಪತ್ರೆಗೆ ಬ ದಿನಗಳಿಂದ ವೈದ್ಯರಿಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ

ಆ) ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.